ಅ) ಇಲ್ಲ.

ಆ) ಕಾರ್ಖಾನೆಯು ಮೇ 1996ರವರೆಗೆ ವೇತನ ನೀಡಿದ್ದು ವೇತನ ಪಾವತಿಸುವ ವಿಷಯದಲ್ಲಿ ತೊಂದರೆ ಉಂಟಾಗಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಕಾರ್ಖಾನೆಯಲ್ಲಿ ಒಟ್ಟು 540 ಜನ ನೌಕರರಿದ್ದು ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರು 120 ಜನ ಆಗಿರುತ್ತಾರೆ.

ವಿಷಯ:- ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿಯನ್ನು ಖಾಸಗಿಯವರಿಗೆ ವಹಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 195 (585)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ):- ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿಯನ್ನು ಖಾಸಗೀಯವರಿಗೆ ವಹಿಸಲು ಸರ್ಕಾರ ಉದ್ದೇಶಿಸಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ:- ಅರಕಲಗೂಡು ಪಟ್ಟಣ ಪಂಚಾಯತಿಯ ಮತದಾರರ ಪಟ್ಟಿಗೆ ಹೆಸರುಗಳನ್ನು ಸೇರಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 197 (416)

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು):- ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಅರಕಲಗೂಡು ಪಟ್ಟಣ ಪಂಚಾಯ್ತಿಯ ಮತದಾರರ ಪಟ್ಟಿಗೆ ಚುನಾವಣೆ ಘೋಷಣೆಯಾದ ಮೇಲೆ ಹೆಸರುಗಳನ್ನು ಸೇರ್ಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಯಾವ ಯಾವ ವಾರ್ಡುಗಳಲ್ಲಿ ಎಷ್ಟೆಷ್ಟು ಹೆಸರುಗಳನ್ನು ಸೇರಿಸಲಾಗಿದೆ.